2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 35/2022

ಪಿ.ಡಬ್ಲ್ಯು: 15   ಸಿಡಬ್ಲ್ಯು:-18

| | | |
|---|---|---|
| ಸಾಕ್ಷಿಯ ಹೆಸರು | : | ರಿಹಾನ್ ಪಾಷಾ |
| ತಂದೆಯ ಹೆಸರು | : | ಗೌಸ್ ಮೋದಿನ್ ಪಾಷಾ |
| ವಯಸ್ಸು | : | 55 ವರ್ಷ |
| ವೃತ್ತಿ | : | ತಹಸಿಲ್ದಾರ್ ಚಳ್ಳಕೆರೆ |
| ವಾಸಸ್ಥಳ | : | ಚಳ್ಳಕೆರೆ |

ಸತ್ಯಪ್ರತಿಜ್ಞೆ ಮಾಡಿದ ದಿನಾಂಕ: 04.12.2025.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

1) ದಿನಾಂಕ 26.11.2020 ರಿಂದ 07.02.2022 ರವರೆಗೆ ಬಳ್ಳಾರಿಯಲ್ಲಿ ತಹಸಿಲ್ದಾರ್ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 22.11.2021 ರಂದು ಮಹಿಳಾ ಪೋಲೀಸ್ ಠಾಣೆಯಿಂದ ಮನವಿ ಪತ್ರ ಬಂದಿದ್ದು ಶ್ರಾವಂತಿ ಗಂಡ ಅನಿಲ್ ಕುಮಾರ್ ಇವರು ಮರಣ ಹೊಂದಿದ್ದಾರೆ, ಅವರ ಶವ ಪಂಚನಾಮೆ ಮಾಡುವ ಬಗ್ಗೆ ವಿನಂತಿಸಿರುತ್ತಾರೆ. ಸದರಿ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-29 ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

2) ಆ ಮನವಿ ಪ್ರಕಾರ ನಾನು ವಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಶವಾಗಾರದಲ್ಲಿ ಶ್ರಾವಂತಿ ಇವಳ ಶವ ಇತ್ತು. ಅದನ್ನು ಹೊರಗೆ ತಗೆದೆ. ಚಾಸಾ-2 ಹಾಗು 3 ಮತ್ತು ಶ್ರೀಮತಿ ಅಂಜಲಿ ಗಂಡ ಮರುಗೇಶ ಇವರ ಸಮಕ್ಷಮ ಈ ಶವವನ್ನು ಮೊದಲು ನೋಡಿದವರು ಯಾರು ಎಂದು ಕೇಳಿದೆ, ಅನಿಲ್ ಕುಮಾರ್ ಮತ್ತು ಈರಣ್ಣ ಎನ್ನುವವರು ನಾವು ಮೊದಲು ನೋಡಿದ್ದೇವೆ ಎಂದು ಹೇಳಿದ್ದರು.

**3)** ಶ್ರಾವಂತಿ ಇವಳು ಜೀವಿತ ಇದ್ದಾಗ ಅವಳನ್ನು ಕೊನೆಯ ಬಾರಿ ಯಾರು ನೋಡಿದ್ದೀರಿ ಎಂದು ಕೇಳಿದಾಗ ಅವರ ಅಣ್ಣ ಲಕ್ಷ್ಮಿ ನರಸಿಂಹ ಹಾಗು ಗಂಡ ಅನಿಲ್ ಕುಮಾರ್ ಅವಳನ್ನು ಜೀವಿತವಿದ್ದಾಗ ಕೂನೆಯ ಬಾರಿ ನೋಡಿದೆವು ಎಂದು ಹೇಳಿದರು. ಅದಾದ ಮೇಲೆ ಸದರಿ ಪಂಚ ರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ಶವ ಪಂಚನಾಮೆಯಲ ಸಮಯದಲ್ಲಿ ಶವದ ಕುತ್ತಿಗೆಯ ಬಲ ಮತ್ತು ಎಡ ಭಾಗದಲ್ಲಿ ಕಂದು ಬಣ್ಣದ ಬಟ್ಟೆಯಿಂದ ಬಿಗಿದ ಮಾರ್ಕ (ಲಿಗೇಚರ್ ಮಾರ್ಕ) ಇತ್ತು.

**4)** ಆ ಬಗ್ಗೆ ಪಂಚನಾಮೆಯನ್ನು ಮಧ್ಯಾಹ್ನ **01.30** ರಿಂದ **03.30** ಗಂಟೆಯವರೆಗೆ ನಿಪಿ-**7** ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ಅದರಲ್ಲಿಯ ಸಾಕ್ಷಿಯ ಸಹಿಗಳನ್ನು ನಿಪಿ-**7**(ಬಿ) ಹಾಗು (ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸಾಯಿನಾಥ ಮತ್ತು ಶಿವಕುಮಾರ ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಸಾವಿನ ನಿಖರ ಕಾರಣಕ್ಕಾಗಿ ವೈದ್ಯಾಧಿಕಾರಿಗಳಿಗೆ ಮರಣೋತ್ತರ ಶವ ಪರೀಕ್ಷೆಗಾಗಿ ಕಳುಹಿಸಿಕೊಟ್ಟೆ. ವೈದ್ಯಾಧಿಕಾರಿಗಳಿಗೆ ಕಳುಹಿಸಿದ ಮನವಿ ಪತ್ರದ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**30** ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-**30**(ಎ) ಎಂದು ಗುರುತಿಸಲಾಯಿತು.

**5)** ಶವ ಪಂಚನಾಮೆ ಮಾಡುವ ಕಾಲಕ್ಕೆ ಈಗ ನೋಡುತ್ತಿರುವ ನಿಪಿ-**8** ರಿಂದ **11** ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ.

<u>ಪಾಟೀಸವಾಲು ಆರೋಪಿತರ ಪರ ಶ್ರೀ ಎಮ್. ಎ.ಬಿ. ವಕೀಲರಿಂದಃ</u>

**6)** ನಿಪಿ-**29** ತನಿಖಾಧಿಕಾರಿಗಳು ನೀಡಿದ ಮನವಿ ಪತ್ರದಲ್ಲಿ ಶ್ರಾವಂತಿ ಇವಳ ಶವ ಇಲ್ಲಿ ಇದೆ ಎಂದು ಬರೆದಿಲ್ಲ ಎಂದರೆ ಸರಿ. ಶವ ವಿಮ್ಸ್ ಆಸ್ಪತ್ರೆಯಲ್ಲಿ ಇದೆ ಎಂದು ಪಿಎಸ್ ಐ ರವರು ಮೌಖಿಕವಾಗಿ ಹೇಳಿರುತ್ತಾರೆ. ಪಂಚರನ್ನು ನಾನೇ ಆಯ್ಕೆ ಮಾಡಿರುತ್ತೇನೆ. ಅವರು ಸ್ಥಳೀಯರು ಹೌದು ಇಲ್ಲವೋ ಎನ್ನುವ ಬಗ್ಗೆ ಅವಳ ವಿಳಾಸದ ಬಗ್ಗೆ ಆಧಾರ್ ಕಾರ್ಡಗಳನ್ನು

ಪರಿಶೀಲನೆ ಮಾಡಲಿಲ್ಲ. ಕಾಲಂ ನಂಬರ್ 7 ರಲ್ಲಿ ನಮೂದಿಸಿದ ಗಾಯದ ಬಗ್ಗೆ ನಾನು ಸ್ವತಃ ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ-7 ಶವ ತನಿಖಾ ವರದಿ ಗಣಕೀಕೃತ ಪ್ರಿಂಟ್ ಮಾಡಲಾಗಿದೆ ಎಂದರೆ ಸರಿ. ಶವಾಗಾರದಲ್ಲಿ ಪ್ರಿಂಟಿಂಗ್ ವ್ಯವಸ್ಥೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಾನು ಮೊದಲು ಬರೆದುಕೊಂಡು ವೈದ್ಯರ ಕೋಣೆಯಲ್ಲಿ ಬೆರಳಚ್ಚು ಮಾಡಿಸಿ ಪ್ರಿಂಟ್ ತೆಗೆದಿರುತ್ತೇನೆ.

7) ನಾನು ಕೈ ಬರಹದಿಂದ ಬರೆದ ಪಂಚನಾಮೆಯ ವರದಿಯನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ. ಕಾಲಂ ನಂಬರ್ 9 ಹಾಗು 10 ರಲ್ಲಿರುವ ಸಾಕ್ಷಿದಾರರ ಹೇಳಿಕೆಗಳನ್ನು ಪಂಚನಾಮೆ ಮುಗಿದ ನಂತರ ಪಡೆದುಕೊಂಡಿರುತ್ತೇನೆ. ಅವರ ಹೇಳಿಕೆಗಳನ್ನು ಕೂಡ ವೈದ್ಯರ ಕೋಣೆಯಲ್ಲಿಯೇ ಬೆರಳಚ್ಚು ಮಾಡಿಸಿ ಪ್ರಿಂಟ್ ತೆಗೆದಿರುತ್ತೇನೆ. ಸಾಕ್ಷಿದಾರರ ಹೇಳಿಕೆಗಳನ್ನು ಪಂಚನಾಮೆ ಮುಗಿದ ನಂತರ ಪಡೆದುಕೊಂಡಿದ್ದರೆ ಶವ ತನಿಖಾ ವರದಿಯ ಕಾಲಂ ನಂಬರ್ 11 ಮತ್ತು 17 ರಲ್ಲಿಯ ಮಾಹಿತಿಯ ಮೂಲ ನಿಮಗೆ ಹೇಗೆ ಗೊತ್ತಾಯಿತು? ಎಂಬ ಪ್ರಶ್ನೆಗೆ ಸಾಕ್ಷಿ ಪಂಚನಾಮೆ ನಡೆಯುವ ವೇಳೆಯಲ್ಲಿಯೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದೆ ಎಂದು ಉತ್ತರಿಸುತ್ತಾರೆ. ಶವ ತನಿಖಾ ವರದಿಯ ಕಾಲಂ 11 ಹಾಗು 17 ರಲ್ಲಿಯ ವಿಷಯಗಳನ್ನು ಪೊಲೀಸರ ಮಾತು ಕೇಳಿ ಬರೆದಿದ್ದೇನೆ ಎಂದರೆ ಸರಿಯಲ್ಲ.

8) ಶವ ತನಿಖಾ ವರದಿಯನ್ನು ವಿಮ್ಸ್ ಆಸ್ಪತ್ರೆಯ ವೈದ್ಯರ ಕೋಣೆಯಲ್ಲಿ ನಮ್ಮ ಸಿಬ್ಬಂದಿ ಬೆರಳಚ್ಚು ಮಾಡಿರುತ್ತಾರೆ. ನಿಪಿ-7 ರಲ್ಲಿ ಅದನ್ನು ವಿಮ್ಸ್ ಆಸ್ಪತ್ರೆಯ ವೈದ್ಯರ ಕೋಣೆಯಲ್ಲಿ ನಮ್ಮ ಸಿಬ್ಬಂದಿ ಬೆರಳಚ್ಚು ಮಾಡಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿ. ನಾನು ಶ್ರಾವಂತಿ ಇವಳ ಶವವನ್ನು ಪೊಲೀಸರ ಮೂಲಕ ವೈದ್ಯಾಧಿಕಾರಿಗಳಿಗೆ ಕಳುಹಿಸಿದೆ ಎಂದರೆ ಸರಿಯಲ್ಲ. ಬಟ್ಟೆಗಳನ್ನು ತಂದು ಹಾಜರುಪಡಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಿದೆ ಎಂದರೆ ಸರಿ. ಪೊಲೀಸರು ಬಟ್ಟೆಗಳನ್ನು ನನ್ನ ಮುಂದೆ ಹಾಜರು ಪಡಿಸಲಿಲ್ಲ. ನಿಪಿ-30 ರಲ್ಲಿ ವೈದರು ನೀಡಿದ ಬಟ್ಟೆಗಳನ್ನು ತನಿಖಾಧಿಕಾಗಳಿಗೆ ನೀಡುವಂತೆ ಆದೇಶಿಸಿಲ್ಲ ಎಂದರೆ ಸರಿ.

**9)** ನಿಪಿ-**8** ರಿಂದ **11** ಭಾವಚಿತ್ರಗಳನ್ನು ನಾನೇ ತೆಗೆದಿರುತ್ತೇನೆ. ಸದರಿ ಭಾವಚಿತ್ರಗಳ ಜೊತೆಗೆ ಕಲಂ **65 (**ಬಿ**)** ಭಾರತೀಯ ಸಾಕ್ಷ್ಯ ಅಧಿನಿಯಮಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿಲ್ಲ ಎಂದರೆ ಸರಿ. ಶವವನ್ನು ಕಳುಹಿಸಿದ್ದು ಪೊಲೀಸರು, ಪಂಚರನ್ನು ಕರೆಯಿಸಿದ್ದು ಪೊಲೀಸರು, ಭಾವಚಿತ್ರಗಳನ್ನು ತೆಗೆದಿದ್ದು ಪೊಲೀಸರು ಆದ್ದರಿಂದ ಸಂಪೂರ್ಣ ಪ್ರಕ್ರಿಯೆ ಪೊಲೀಸರ ಮೇಲುಸ್ತುವಾರಿಯಲ್ಲಿ ನಡೆದಿದೆ ಎಂದರೆ ಸರಿಯಲ್ಲ.

**10)** ಸಾಯಿನಾಥ ಇವರು ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಲಕ್ಷ್ಮಿ, ಸುಜಾತ ಹಾಗು ಅರುಣಾ ಇವರು ವರದಕ್ಷಿಣೆ ಕೇಳಿದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಒಂದು ಬಂಗಾರದ ಉಂಗುರ, ಬಂಗಾರದ ಚೈನು ಮತ್ತು ಬ್ರಾಸ್ ಲೈಟಗಳನ್ನು ಕೊಡಲಾಗಿದೆ ಎಂದು ಸಾಯಿನಾಥ ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಹೇಳಿಕೆಗಳನ್ನು ಪೊಲೀಸರೆ ಬೆರಳಚ್ಚು ಮಾಡಿದ್ದಾರೆ, ನಾನು ಯಾವುದೇ ಪಂಚನಾಮೆ ಮಾಡಿಲ್ಲ ಹಾಗು ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.